# ಬುದ್ಧ ನಡೆದು ಬಂದ ದಾರಿ: ಒಂದು ಅವಲೋಕನ

**ತಾರಾ ಬಿ. ಎನ್.**

ಮುಖ್ಯಸ್ಥರು, ಇತಿಹಾಸ ವಿಭಾಗ, ಕೆ.ಎಲ್.ಇ ಸಂಸ್ಥೆಯ ಶ್ರೀ ಮೃತ್ಯುಂಜಯ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಧಾರವಾಡ.

**Received: 09-06-2024 ; Acepted: 10-08-2024 ; Published: 07-09-2024**

**DOI: https://doi.org/10.5281/zenodo.13724803**

**ABSTRACT:**

ಅರಿವಿನ ದಾರಿ ಕಾಣದೆ ಜನ ನರಳಾಡುವಾಗ ಅರಿತ ದಾರಿ ತೋರುವ ಮಹಾಪುರುಷರ ಅವತಾರವಾಗುತ್ತದೆ ಎಂಬುವುದು ಜನಾಭಿಪ್ರಾಯ. "ಯದಾ ಯದಾಹಿ ಧರ್ಮಶ್ಯ ಗ್ಲಾನಿರ್ಭವತಿ ಭಾರತ" ಎಂಬುದಕ್ಕೆ ಸಾಕ್ಷಿಯಾಗಿದ್ದೇ ಕ್ರಿ.ಪೂ. 6ನೇ ಶತಮಾನ. ಜಗತ್ತಿನಾದ್ಯಂತ ಅನೇಕ ಮಹಾಪುರುಷರ ಜನನವಾಗಿದ್ದು. ಅವರಲ್ಲಿ ಬೌದ್ಧ ಧರ್ಮದ ಪ್ರವರ್ತಕ ಗೌತಮ ಬುದ್ಧನೂ ಒಬ್ಬ. ಅಂತಹ ಬುದ್ಧ ನಡೆದು ಬಂದ ದಾರಿಯ ಅವಲೋಕನ ಈ ಸಂಶೋಧನಾ ಲೇಖನದ ಉದ್ದೇಶ.

**KEYWORDS:**

ಪರಿತ್ಯಾಗ, ಸನ್ಯಾಸ, ಧರ್ಮಚಕ್ರ ಪ್ರವರ್ತನ, ಅಷ್ಟಾಂಗಮಾರ್ಗ, ಭೋದಗಯಾ, ಭೋಧಿ ವೃಕ್ಷ, ರಾಜಾಶ್ರಯ.

ಸಿದ್ಧಾರ್ಥನು ಜನಿಸಿದಾಗ ಅನೇಕ ಆಶ್ಚರ್ಯಕರ ಘಟನೆಗಳು ಸಂಭವಿಸಿದ್ದವು. ಈ ಚಮತ್ಕಾರಿ ಕಂದನನ್ನು ನೋಡಲು ದೇಶದ ಮೂಲೆ ಮೂಲೆಯಿಂದ ಜನರು, ಋಷಿಮುನಿಗಳೂ ಕೂಡಾ ರಾಜಧಾನಿ ಕಪಿಲವಸ್ತುವಿಗೆ ಆಗಮಿಸಿದರು. ಅದರಲ್ಲಿ ಒಬ್ಬರು ಅಸಿತ ಮಹರ್ಷಿ ಇದ್ದರು. ಅವರು ಈ ಮಗು ನೋಡಿ ಮುಗುಳು ನಗೆ ನಕ್ಕರು. ಆದರೂ ಅವರ ಕಣ್ಣಂಚಲ್ಲಿ ಅಶ್ರು ಇರೋದನ್ನು ಗಮನಿಸಿದ ಶುದ್ಧೋದನ ಕಾರಣ ಕೇಳಲಾಗಿ ಅವರು "ನಿನ್ನ ಮಗ ಒಬ್ಬ ಶ್ರೇಷ್ಠ ರಾಜನಾಗುತ್ತಾನೆ. ಇಲ್ಲದಿದ್ದರೆ ಒಬ್ಬ ಶ್ರೇಷ್ಠ ಜ್ಞಾನಿಯಾಗಿ ಜಗತ್ತಿಗೆ ಬೆಳಕು ನೀಡುತ್ತಾನೆ. ಆದರೆ ಇವನ ಕೀರ್ತಿ ನೋಡಲು ನಾನಿರುವುದಿಲ್ಲ ಎಂದು ದುಃಖ ಪಟ್ಟೆ" ಎಂದರು. ಅದನ್ನು ಕೇಳಿದ ರಾಜನಿಗೆ ದಿಗಿಲು ಉಂಟಾಯಿತು. ಏನೆಂದರೆ ಮಹೋದ್ಧಾರಕ ಸನ್ಯಾಸಿಯಾದರೆ ಗತಿ ಏನು? ಅದಕ್ಕಾಗಿ ಶುದ್ಧೋಧನನು ಸಿದ್ಧಾರ್ಥನ ಶಿಕ್ಷಣದ ಎಲ್ಲ ವ್ಯವಸ್ಥೆಯನ್ನು ತನ್ನ ಅರಮನೆಯಲ್ಲಿಯೇ ಮಾಡಿದ. ದುಃಖ ದುಮ್ಮಾನಗಳು ಸಿದ್ಧಾರ್ಥನಿಗೆ ಕಾಣದಂತೆ, ನೋವು ಅವನ ಅರಿವಿಗೆ ಬರದಂತೆ ಶ್ರಮದಾಯಕ ಪ್ರಯತ್ನ ಮಾಡಿದನು. ಆದರೆ ಆಗುವದನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ. 16ನೇ ವಯಸ್ಸಿನಲ್ಲಿ ಆತನಿಗೆ ಸೋದರ ಮಾವನ ಮಗಳು ಯಶೋಧರಾ {ಭದ್ರ ಕಚ್ಚಾನಾ, ಸುಭದ್ರಕಾ ಬಿಂಬಾ ಅಥವಾ ಗೋಪಾ ಎಂದು ಕರೆಯಲ್ಪಡುವ} ಕನ್ಯೆಯೊಂದಿಗೆ

ವಿವಾಹವಾಗುತ್ತದೆ. ನಂತರ ರಾಹುಲನ ಜನನ. ಏನೇ ಆದರೂ ಸಿದ್ಧಾರ್ಥನಿಗೆ ಪ್ರಾಯದಲ್ಲಿ ಶಾಂತಿ ಸುಖ, ಆನಂದ ಲಭ್ಯವಾಗಲಿಲ್ಲ. ಅವನ ಮನಸ್ಸನ್ನು ಆಹ್ಲಾದಕರವಾಗಿಡಲು ಶುದ್ಧೋಧನ ಪಟ್ಟಪಾಡು ಅಷ್ಟಿಷ್ಟಲ್ಲ. ಸಿದ್ಧಾರ್ಥನು ಸದಾ ಅನ್ಯಮನಸ್ಕನಾಗಿರುತ್ತಿದ್ದ. ಮನರಂಜನೆಯ ಬಗ್ಗೆ ಅವನಿಗೆ ಆಸಕ್ತಿ ಇರಲಿಲ್ಲ, ಒಂದು ರಾತ್ರಿ ಚೆನ್ನನೊಡನೆ ಹಠ ಮಾಡಿ ಕಪಿಲವಸ್ತುವನ್ನು ನೋಡಲು ಹೋದನು. ಅಲ್ಲಿ ಒಬ್ಬ ವೃದ್ಧ, ಸನ್ಯಾಸಿ, ರೋಗಿ ಮತ್ತು ಶವವನ್ನು ನೋಡಿದ. ಚೆನ್ನನ ವಿವರಣೆಯಿಂದ ಜೀವನದ ಮರ್ಮ, ಕಷ್ಟ ಬಂಧನಗಳ ಬಗೆಗೆ ತಿಳಿಯಿತು. ನಂತರದಲ್ಲಿ ಅವನ ಜೀವನದಲ್ಲಿ ಆದ ಬದಲಾವಣೆಯೇ ಬೇರೆ. ಸತ್ಯಶೋಧನೆಯಲ್ಲಿ ತೊಡಗಿದ ಸಿದ್ಧಾರ್ಥ ಸನ್ಯಾಸಿಯಾಗಿ ತಂದೆ, ತಾಯಿ, ಪತ್ನಿ, ಪುತ್ರ, ಅರಮನೆ ತೊರೆದು ಸ್ಥಳದಿಂದ ಸ್ಥಳಕ್ಕೆ ಗುರುಗಳನ್ನು ಹುಡುಕಿ ಸಂಚರಿಸಿದನು. ಈ ವೇಳೆಗೆ ಅದಾರ ಕಲಮ ಎಂಬ ದಾರ್ಶನಿಕ ಬಳಿ 2 ವರ್ಷ ಕಳೆದ ತೃಪ್ತಿಯಾಗಲಿಲ್ಲ. ನಂತರ ರಾಜಗೃಹಕ್ಕೆ ಬಂದು ಉದ್ರಕ ಎಂಬ ಗುರುವಿನ ಬಳಿ ಬಂದು ಏಕಾಗ್ರತೆ ಕಲಿತ. ಅಲ್ಲಿಯೂ ಆತನಿಗೆ ಸಮಾಧಾನ ಸಿಗಲಿಲ್ಲ. ಸಾಧನೆಯ ಮಾರ್ಗವೂ ತಿಳಿಯಲಿಲ್ಲ. ನಂತರ ಗಯಾ ಕ್ಷೇತ್ರಕ್ಕೆ ಬಂದು ಉರವೇಲು ಗ್ರಾಮಕ್ಕೆ ಬಂದನು. ಅಲ್ಲಿ ಘೋರ ತಪಸ್ಸು ಮಾಡಿದನು. ಈ ತಪಸ್ಸಿನಿಂದಾಗಿ ದೇಹ ಸವೆದು ಎಲುಬಿನ ಹಂದರವಾಗಿ ಪ್ರಜ್ಞಾಹೀನನಾಗಿ ಬಿದ್ದ. ಆದರೂ ಅವನಿಗೆ ಜ್ಞಾನೋದಯವಾಗಲಿಲ್ಲ. ದೇಹ ದಂಡನೆಯಿಂದ ಜ್ಞಾನೋದಯ ಸಾಧ್ಯವಾಗದು ಎಂಬ ಸತ್ಯ ಅರಿತು ಅಲ್ಲಿಂದ ಮುಂದೆ ಸಾಗಿ ನಿರಂಜನಾ ನದಿಯಲ್ಲಿ ಮಿಂದು ಗಯಾಗೆ ಬಂದು ಅಶ್ವತ್ಥ ವೃಕ್ಷದ ಕೆಳಗೆ ಕುಳಿತು ಜ್ಞಾನ ಮಗ್ನನಾದನು. ವೈಶಾಖ ಶುದ್ಧ ಪೌರ್ಣಿಮೆಯ ದಿನ ಸಿದ್ಧಾರ್ಥನಿಗೆ "ಪರಮಜ್ಞಾನ" ಲಭ್ಯವಾಯಿತು. ನಂತರ ಆತನನ್ನು 'ಬುದ್ಧ' ಎಂದು ಕರೆಯಲಾಯಿತು. ತಥಾಗತ ಎಂತಲೂ ಕರೆಯಲಾಯಿತು. ಅಂದರೆ 'ಜ್ಞಾನಿ' ಸತ್ಯವನ್ನು ತಿಳಿದವ ಎಂದು ಅರ್ಥ. ಜ್ಞಾನೋದಯದ ನಂತರ ಗಯಾವನ್ನು ಬೋಧಗಯಾ ಎಂದೂ ಅಶ್ವತ್ಥ ವೃಕ್ಷವನ್ನು ಭೋಧಿವೃಕ್ಷವೆಂತಲೂ ಕರೆಯಲಾಯಿತು. ಸಿದ್ಧಾರ್ಥನಿಗೆ ಶಾಕ್ಯಮುನಿ ಭಗವಾನ್ ಬುದ್ಧ ಎಂದು ಕರೆಯಲಾಯಿತು.

ಈ ರೀತಿ ಸತ್ಯದ ಶೋಧನೆ ಮಾಡಿದ ಬುದ್ಧ ಜಗತ್ತಿನ ದುಃಖ ನಿವಾರಣೆ ಮಾರ್ಗ ಹುಡುಕಿದ. ನಂತರ ಮೊಟ್ಟ ಮೊದಲು ವಾರಣಾಸಿಯ ಹತ್ತಿರದ ಸಾರಾನಾಥದಲ್ಲಿ ಹರಿಣ ಉದ್ಯಾನಕ್ಕೆ ತೆರಳಿ ಅಲ್ಲಿ ತನ್ನ ಮೊಟ್ಟ ಮೊದಲನೆಯ ಪ್ರವಚನ ನೀಡಿದನು. ಅಲ್ಲಿ ಕೇವಲ 5 ಜನ ಮಾತ್ರ ಅವನ ಶಿಷ್ಯರಾದರು. ಅವರೇ ಕೊಂಡಣ್ಣ, ಏಪು, ಭವ್ವಾಜಿ, ಮಹಾನಾಮ ಮತ್ತು ಅನ್ನಾಜಿ. ಇದನ್ನೇ ಧರ್ಮಚಕ್ರ ಪರಿವರ್ತನ ಎಂದು ಕರೆಯುತ್ತಾರೆ. ನಂತರ ಬುದ್ಧನು ಧರ್ಮ ಪ್ರಚಾರಕ್ಕಾಗಿ ಸ್ಥಳದಿಂದ ಸ್ಥಳಕ್ಕೆ ಸಂಚರಿಸಿದ. ಅನೇಕರು ಅವನ ಅನುಯಾಯಿಗಳಾದರು. ರಾಜಗೃಹದಲ್ಲಿ ಅರಸ ಬಿಂಬಸಾರನು ಶಿಷ್ಯನಾದನು. ನಂತರ ಸಾರಿಪುತ್ರ ಮೊಗ್ಗಲಿಪುತ್ರ ಎಂಬುವವರು ಶಿಷ್ಯನಾದರು. ಬುದ್ದನು ಕೋಸಲದ ರಾಜಧಾನಿ ಶ್ರಾವಸ್ಥಿಗೆ ಹೋದನು. ಅಲ್ಲಿ ರಾಜ ಪ್ರಸೇನಜಿತನು ಅನುಯಾಯಿಯಾದನು. ಕೋಸಲದಿಂದ ಕಪಿಲ ವಸ್ತುವಿಗೆ ಬಂದನು. ಅಲ್ಲಿ ಅವನ ಮಗ ರಾಹುಲನೂ ಕೂಡಾ ಬೌದ್ಧ ಸನ್ಯಾಸಿಯಾದನು. ಹೆಂಡತಿ, ತಾಯಿ, ಅನುಯಾಯಿಗಳಾದರು. ಬುದ್ಧನ ಚಿಕ್ಕಪ್ಪನ ಮಗ ಆನಂದ ಮತ್ತು ದೇವದತ್ತ, ಅನಿರುದ್ಧ ಮತ್ತು ಉಪವಲಯರು ಆತನ ಶಿಷ್ಯರಾದರು.

(ಆನಂದನು ಪರಮ ಶಿಷ್ಯನಾದರೆ ದೇವದತ್ತನು ಪರಮ ದ್ರೋಹಿಯಾದನು). ಕಪಿಲವಸ್ತುವಿನಲ್ಲಿ ಸಾವಿರಾರು ಜನ ಅವನ ಅನುಯಾಯಿಗಳಾದರು. ಮುಂದೆ 45 ವರ್ಷಗಳ ಕಾಲ ಪರಿವ್ರಾಜಕನಾಗಿ (ಧರ್ಮ ಮತ್ತು ಪ್ರವರ್ತಕ) ಔದ್ (ಅಯೋಧ್ಯ), ಬಿಹಾರದ ಸುತ್ತಮುತ್ತಲಿನ ಊರುಗಳಲ್ಲಿ ಸಂಚರಿಸಿ ಜನರಾಡುವ ಅತ್ಯಂತ ಸರಳ ಭಾಷೆ ಪಾಳಿಯಲ್ಲಿಯೇ ಬೋಧಿಸಿದನು. ರಾಜಾಶ್ರಯದ ಬೆಂಬಲದಿಂದ ಸಂಘವನ್ನು ಸ್ಥಾಪಿಸಿ ಧರ್ಮ ಪ್ರಚಾರ ಮಾಡಿದನು. ವರ್ಷದಲ್ಲಿ ಮಳೆಗಾಲದ 4 ತಿಂಗಳುಗಳನ್ನು ಹೊರತು ಪಡಿಸಿ ಉಳಿದ 8 ತಿಂಗಳುಗಳ ಕಾಲ ಧರ್ಮ ಪ್ರಚಾರ ಮಾಡಿದನು. ಮೊದಮೊದಲು ಸ್ತ್ರೀಯರು ಸಂಘ ಸೇರಲು ವಿರೋಧ ಮಾಡಿದನು. ಆತನ ಸಾಕು ತಾಯಿ ಗೌತಮಿ ಮತ್ತು ತನ್ನ ಆಪ್ತ ಶಿಷ್ಯ ಆನಂದನ ಶ್ರಮದಿಂದ ವೈಶಾಲಿಯಲ್ಲಿ ಸ್ತ್ರೀ ಭಿಕ್ಷಾ ಸಂಘಗಳನ್ನು ಸ್ಥಾಪಿಸಿದನು. ಧರ್ಮೋಪದೇಶ ಮಾಡಿದನು. ಅವನ ಬೋಧನೆಗಳ (ತತ್ವಗಳನ್ನು) ಶಾಸನಗಳೆಂದೇ ಕರೆಯುತ್ತಾರೆ.

ತನ್ನ 80ನೇ ವಯಸ್ಸಿನಲ್ಲಿ ಗೋರಖಪುರ ಜಿಲ್ಲೆಯ ಕುಶೀನಗರದಲ್ಲಿ (ಈಗಿನ ಕಾಶ್ಯ) ನಿರ್ವಾಣ ಹೊಂದಿದನು.

**4 ಆರ್ಯ ಸತ್ಯಗಳು (ಚತ್ತರಿ ಅರಿಯ ಸಚ್ಚಾನಿ):**

1. ಜೀವನ ದುಃಖಮಯವಾಗಿದೆ. (ಪ್ರಾಪಂಚಿಕ ವಿಷಯಗಳಿಗೆ ಅಂಟಿಕೊಂಡಿರುವುದೇ ದುಃಖ)
2. ದುಃಖದ ಕಾರಣ ದುರಾಸೆ, ಲೋಭ, ಸುಖ, ಭೋಗ, ತೃಷೆ, ಅಧಿಕಾರದ ಅಪೇಕ್ಷೆ.
3. ದುರಾಸೆ, ಲೋಭಗಳನ್ನು ತೊರೆಯಬೇಕು.
4. ಅದಕ್ಕೆ ಸಾಧುಮಾರ್ಗ ಅನುಸರಿಸಬೇಕು.

ಅಷ್ಟಾಂಗಮಾರ್ಗದ ಅನುಕರಣೆ ಇದರಿಂದ ಜ್ಞಾನದ ಕಣ್ಣು ತೆರೆಯುತ್ತದೆ. ವಿವೇಚನೆ ಲಭ್ಯವಾಗುತ್ತದೆ. ಶಾಂತಿ ನೆಮ್ಮದಿ ಸಿಗುತ್ತದೆ. ಒಳ್ಳೆಯ ಜ್ಞಾನದಶನವಾಗುತ್ತದೆ.

ಸತ್‌ನಂಬಿಕೆ (ಒಳ್ಳೆಯ ನಂಬಿಕೆ), ಸತ್‌ನಿರ್ಧಾರ (ಒಳ್ಳೆಯ ಆಲೋಚನೆ), ಸತ್‌ಮಾತು (ಒಳ್ಳೆಯ ಮಾತು), ಸುಕರ್ಮ (ಒಳ್ಳೆಯ ನಡತೆ), ಸತ್‌ಜೀವನ (ಒಳ್ಳೆಯ ಜೀವನ), ಸತ್‌ಪ್ರಯತ್ನ (ಒಳ್ಳೆಯ ಪ್ರಯತ್ನ), ಸತ್‌ವಿಚಾರ (ಒಳ್ಳೆಯ ವಿಚಾರ), ಸತ್‌ಚಿತ್ತ (ಒಳ್ಳೆಯ ಧ್ಯಾನ), ಏಕಾಗ್ರತೆ ಇವೇ ಮುಂತಾದ ಮಾರ್ಗಗಳ ಮೂಲಕ ಜ್ಞಾನ ಪಡೆಯಬಹುದು.

ಈ ಅಷ್ಟಾಂಗ ಮಾರ್ಗಗಳನ್ನು ಮಧ್ಯ ಮಾರ್ಗ ಎನ್ನುತ್ತಾರೆ. ಯಾಕೆಂದರೆ ಇಂದ್ರಿಯಾಸಕ್ತ ಸಂತೋಷ ಮತ್ತು ದೇಹದಂಡನೆಯೆಂಬ ಎರಡೂ ವೈಪರೀತ್ಯಗಳ ನಡುವಿನ ಮಾರ್ಗವಾಗಿದೆ. ಬುದ್ಧನು ದೇವರ ಇರುವಿಕೆಯ ಬಗೆಗೆ ಯಾವದೇ ರೀತಿಯ ಮಾಹಿತಿ ನೀಡಿಲ್ಲ. ಉಚ್ಚ ನೀಚ ಎಂಬ ಬೇಧ ಭಾವ ಕೂಡಾ ಇಲ್ಲ. ಯಜ್ಞಯಾಗಾದಿಗಳ ಜಂಜಾಟವಿಲ್ಲ. ಆದರೆ ಕರ್ಮ ಸಿದ್ಧಾಂತ ಬಗ್ಗೆ ನಂಬಿಕೆ ಮಾತ್ರ ಇತ್ತು.

ಗೌತಮನು ಜಾತಿ ವ್ಯವಸ್ಥೆಯನ್ನು ವಿರೋಧಿಸಿದನು. ಅಹಿಂಸೆಗೆ ಹೆಚ್ಚಿನ ಆದ್ಯತೆಯನ್ನು ನೀಡಿದನು. ಜೀವನದ ಪ್ರತಿಯೊಂದು ಹಂತದಲ್ಲಿ ಅಹಿಂಸಾ ಮಾರ್ಗ ಪರಿಪಾಲಿಸಬೇಕೆಂದು ಹೇಳಿದನು.

**ಬೌದ್ಧ ಸಂಘಗಳ ಸ್ಥಾಪನೆ:**

ಬೌದ್ಧಸನ್ಯಾಸಿಗಳ ಗುಂಪನ್ನು ಸಂಘವೆಂದು ಕರೆಯುವರು. ಅಲ್ಲಿ ಸಂಘದ ವಿವಿಧ ನೀತಿ ನಿಯಮಗಳನ್ನು ರೂಪಿಸಲಾಯಿತು.

**ಬುದ್ಧಂ ಶರಣಂ ಗಚ್ಛಾಮಿ**
**ಸಂಘಂ ಶರಣಂ ಗಚ್ಛಾಮಿ**
**ಧರ್ಮಂ ಶರಣಂ ಗಚ್ಛಾಮಿ**

ಇವುಗಳು ಬೌದ್ಧ ಯತಿಗಳ ಮಂತ್ರಗಳಾಗಿದ್ದವು.

ಬುದ್ಧನು ಮಹಾಜ್ಞಾನವನ್ನು ಪಡೆದ ನಂತರ ಸರಿಸುಮಾರು 45 ವರ್ಷಗಳ ಕಾಲ ತಾನರಿತ ತತ್ವಗಳನ್ನು ಬೋಧಿಸಿದನು. ತನ್ನ ಜೀವಿತಾವಧಿಯಲ್ಲಿಯೇ ಬೌದ್ಧ ಧರ್ಮಕ್ಕೆ ಭದ್ರ ಬುನಾದಿ ಹಾಕಿ ಸುಸಂಘಟಿತ ಸಂಘವನ್ನು ಕಟ್ಟಿ ಬೌದ್ಧ ಧರ್ಮ ಬರೀ ಭಾರತದಲ್ಲಿ ಮಾತ್ರವಲ್ಲ ಜಗತ್ತಿನಾದ್ಯಂತ ಪ್ರಸಾರವಾಗುವಲ್ಲಿ ಬುದ್ಧನ ಶ್ರಮ ಅತ್ಯಂತ ಪ್ರಮುಖವಾಗಿದೆ. ಸಾರಿಪುತ್ರ ಮೊಗ್ಗಲಿ, ಆನಂದ, ಅನಿರುದ್ಧ, ಮಹಾಕಷ್ಯಪ, ಉಪಾಲಿ, ಮಹಾ ತಚ್ಛಾಯನ್, ಮಹಾ ತಸ್ವಿನ್ ಪ್ರಸಿದ್ಧ ಸನ್ಯಾಸಿಗಳಾಗಿದ್ದರು. ಅದರಲ್ಲಿ ಸಾರಿಪುತ್ರನು ಅಭಿದಮ್ಮದಲ್ಲಿ ವಿಶೇಷ ಪಾರಂಗತನಾಗಿದ್ದನು. ಮೊಗ್ಗಲನು ಮಾಯಾವಿದ್ಯೆಯಲ್ಲಿ, ಆನಂದನು ಬುದ್ಧನ ಅತ್ಯಂತ ಆಪ್ತನಾಗಿದ್ದರಿಂದ ಬುದ್ಧನ ಪ್ರತಿ ಶಬ್ದವೂ ಅವನ ನೆನಪಿನಲ್ಲಿತ್ತು. ಧರ್ಮದಲ್ಲಿ ಅತೀವ ನಿಪುಣನಾಗಿದ್ದನು. ಇನ್ನೊಂದು ವಿಶೇಷವೆಂದರೆ ಉಪಾಲಿ ಎಂಬಾತನು ಕ್ಷೌರಿಕನಾಗಿದ್ದನು ವಿನಯಕ್ಕೆ ಇನ್ನೊಂದು ಹೆಸರೇ ಅವನಾಗಿದ್ದನು.

ಬುದ್ಧನ ಅರಿವಿನ ಪಯಣದ ದಾರಿ ಬೇರೆ ರೀತಿಯದಾಗಿತ್ತು. ನಿತ್ಯ ಸತ್ಯವನ್ನು ಸರಳವಾಗಿ ಹೀಗೆ ತಿಳಿಸುತ್ತಿದ್ದನು. ಒಮ್ಮೆ ನಡೆದ ಒಂದು ಘಟನೆಯಿಂದ ತಿಳಿಯಬಹುದು. ಕಿಸಾಗೌತಮಿ ಎಂಬಾಕೆ ಶ್ರಾವಸ್ಥಿಯ ಒಬ್ಬ ವ್ಯಾಪಾರಿಯ ಮಗನೊಂದಿಗೆ ವಿವಾಹವಾಗಿತ್ತು. ಅವರಿಗೆ ಬಹಳ ವರ್ಷಗಳ ನಂತರ ಒಂದು ಸುಂದರ ಗಂಡು ಮಗು ಜನಿಸಿತು. ಕೆಲವು ದಿನಗಳ ನಂತರ ಅನಾರೋಗ್ಯದಿಂದ ಮರಣಿಸಿತು. ಬಹಳ ದುಃಖಿತಳಾದ ಗೌತಮಿ ಊರ ಹೊರವಲಯದಲ್ಲಿ ಗೌತಮ ಬುದ್ಧನ ಬಳಿ ಬಂದು ಅವನ ಎದುರಿಗೆ ಮಗುವನ್ನು ಮಲಗಿಸಿ ಪ್ರಭುವೆ ನನ್ನ ಈ ಮಗುವನ್ನು ಬದುಕಿಸಿ ಕೊಡಿ ಎಂದು ಬೇಡಿದಳು. ಶಾಂತಿ ಸ್ವರೂಪನಾದ ಬುದ್ಧನು ಅವಳ ಅಂತಃಕರಣದ ಪ್ರೀತಿ, ವಾತ್ಸಲವನ್ನು ಕಂಡು ಅವಳಿಗೆ ಮರಣದ ಸತ್ಯವನ್ನು ತಿಳಿಸುವ ಪ್ರಯತ್ನ ಮಾಡುವನು. ಕಿಸಾಗೌತಮಿಗೆ ತಾಯಿ ನೀನು ಪಕ್ಕದ ಊರಲ್ಲಿ ಸಾವಿಲ್ಲದ ಮನೆಯಿಂದ ಹಿಡಿ ಸಾಸಿವೆ ತೆಗೆದುಕೊಂಡು ಬಂದರೆ ನಾನು ನಿನ್ನ ಮಗನನ್ನು ಬದುಕಿಸುವೆನೆಂದು ಹೇಳಿದನು. ಮಗುವನ್ನು ಬದುಕಿಸುವೆ ಎಂಬ ಮಾತು ಕೇಳಿದ ಗೌತಮಿ ತಡಮಾಡದೆ ಊರ ಕಡೆ ಓಡಿದಳು. ಊರ ಜನರ ಪ್ರತಿ ಮನೆ ಮನೆಗೆ ಹೋಗಿ ಸಾಸಿವೆ ಕೇಳಿದಳು.

ಗೌತಮಿಯು ಸಾಸಿವೆ ಕೇಳುವ ಪ್ರತೀ ಮನೆಗಳಲ್ಲಿ ಮರಣಿಸಿದ್ದರು. ಹೀಗೆ ಬೆಳಗಿನಿಂದ ಸಂಜೆಯ ವರೆಗೆ ಊರ ಎಲ್ಲ ಮನೆಗಳನ್ನು ತಿರುಗಿದರೂ ಅವಳಿಗೆ ಸಾವಿಲ್ಲದ ಮನೆಯ ಸಾಸಿವೆ ಸಿಗಲೇ ಇಲ್ಲಾ. ಅಂತ್ಯಕ್ಕೆ ಸಾವು ಇಲ್ಲದ ಮನೆ ಈ ಸಂಸಾರದಲ್ಲಿ ಎಲ್ಲಿಯೂ ಇಲ್ಲ, ಸಾವು ಎಂಬುದು ನಿಶ್ಚಿತವಾದದ್ದು ಎಂಬುದರ ಅರಿವನ್ನು ಹಾಗೂ ಅದು ಪ್ರಕೃತಿ ನಿಯಮ ಎಂಬುದನ್ನು ಅರಿತು ಮರಳಿ ಬುದ್ಧನ ಬಳಿ ಬಂದು ಜೀವನದ ಸತ್ಯವನ್ನು ಅರಿತು ಮಗುವಿನ ಶವ ಸಂಸ್ಕಾರ ಮಾಡಿ ಬುದ್ಧನ ಬಳಿ ಬಂದು ತಾನು ಬೌದ್ಧ ಭಿಕ್ಷುಣಿಯಾಗಿ ಸಂಘ ಸೇರಿದಳು.

**ಬೌದ್ಧ ಸಂಘದಲ್ಲಿ ಸನ್ಯಾಸಿನಿಯರು (ಭಿಕ್ಷುಣಿಯರು):**

ಪ್ರಾರಂಭದಲ್ಲಿ ಬುದ್ಧನು ಸಂಘಕ್ಕೆ ಸ್ತ್ರೀಯರನ್ನು ಸೇರಿಸಿಕೊಳ್ಳಲು ಅಪಾರ ವಿರೋಧ ವ್ಯಕ್ತಪಡಿಸದ್ದನು. ಯಾಕೆಂದರೆ ಸ್ತ್ರೀ ಪ್ರಭುತ್ವವೇ ಹೆಚ್ಚಾಗಬಹುದೆಂಬ ಭಾವನೆ ಆತನಲ್ಲಿತ್ತು. ಆತನ ಚಿಕ್ಕಮ್ಮ ಗೌತಮಿ ಸಂಘ ಸೇರ ಬಯಸಿದಾಗ ಮತ್ತು ಆನಂದನ ಪ್ರಯತ್ನದಿಂದ ಅವಕಾಶ ದೊರೆಯಿತು. ಅವರಿಗಾಗಿ 8 ನಿಯಮಗಳನ್ನು ರೂಪಿಸಲಾಯಿತು. ಒಟ್ಟು 23 ಸನ್ಯಾಸಿಯರು ಸಂಘದಲ್ಲಿರು. ಅವರು ಬರೆದ ಕವನಗಳು ಥೇರಿಗಾಥಾದಲ್ಲಿ ಕಂಡು ಬರುತ್ತವೆ. ಪ್ರಮುಖ ಪ್ರಸಿದ್ಧ ಸನ್ಯಾಸಿನಿಯರೆಂದರೆ ಖೇಮ, ಉಪ್ಪಾಲವನ್ನ, ಪಟಚಾರ, ಭದ್ಧ, ಕುಂಡಲಕೇಶ, ಕಿಸಾಗೋತಮಿ, ಧಮ್ಮದಿನ್ನ, ವಿಶಾಖಾ ಮುಂತಾದವರು ಅದರಲ್ಲಿ ವಿಶಾಖಾ ಮಾತ್ರ ಸಾಮಾನ್ಯ ಸ್ತ್ರೀಯಾಗಿದ್ದಳು.

ವೈಶಾಲಿಯ ಅಮ್ರಪಾಲಿ ಎಂಬ ಸಾಮಾನ್ಯ ವೇಶ್ಯೆ ಕೂಡಾ ಬೌದ್ಧ ಧರ್ಮ ಸ್ವೀಕರಿಸಿ ಸನ್ಯಾಸಿಯಾದಳು. ಸಂಘದಲ್ಲಿ ಧರ್ಮಶ್ರದ್ಧೆ, ತ್ಯಾಗ, ಕಷ್ಟ ಸಹಿಷ್ಣುತೆ, ಅನನ್ಯವಾಗಿ ಬೆಳೆಯಲು ಮುಖ್ಯ ಕಾರಣ ಬುದ್ಧ. ಆತನ ಸದಾ ಹಸನ್ಮುಖ, ಶಾಂತಚಿತ್ತತೆ ಕಾರಣವೆಂದರೆ ತಪ್ಪಾಗಲಾರದು.

**ಬೌದ್ಧಧರ್ಮ ಪ್ರಸಾರ:**

ಜ್ಞಾನೋದಯದ ನಂತರ ಬುದ್ಧನು ಮಹಾಕೋಸಲ, ವೈಶಾಲಿ, ಶಾಕ್ಯ, ವಜ್ಜ, ಮಲ್ಲ, ಅಂಗ, ಕೋಶಾಂಬಿ ರಾಜ್ಯಗಳಲ್ಲಿ ಸಂಚರಿಸಿ ಬೌದ್ಧ ಧರ್ಮ ಪ್ರಸಾರ ಮಾಡಿದುದರ ಪರಿಣಾಮವಾಗಿ ಆ ರಾಜ್ಯಗಳ ಎಲ್ಲ ಅರಸರು ಧರ್ಮ ಸ್ವೀಕರಿಸಿ ರಾಜಾಶ್ರಯವನ್ನು ಕೂಡಾ ನೀಡಿದರು. ಇದರ ಫಲವಾಗಿ ಬಹಳ ವಿಸ್ತೃತವಾಗಿ ಧರ್ಮಪ್ರಸಾರವಾಯಿತು. ಬೌದ್ಧಧರ್ಮವು ಅಧೀಕೃತ ರಾಜಧರ್ಮವಾಗಿ ಬೆಳೆಯಿತು. ಅಲ್ಲದೇ ಅರಸರು ಧರ್ಮಪ್ರಸಾರಕ್ಕಾಗಿ ಧರ್ಮ ಮಹಾಮಾತ್ರರನ್ನು ನೇಮಕ ಮಾಡಿದರು. ಮುಖ್ಯವಾಗಿ ಅಶೋಕನು ಬೌದ್ಧಧರ್ಮದ ಸ್ವೀಕಾರದ ನಂತರ ರಾಜಧರ್ಮವನ್ನಾಗಿಸಿ ಧರ್ಮಮಹಾಮಾತ್ರರನ್ನು ನೇಮಿಸಿ ಧರ್ಮ ಪ್ರಸಾರ ಮಾಡುವಂತೆ ಮಾಡಿದನು. ತನ್ನ ಮಕ್ಕಳಾದ ಮಹೇಂದ್ರ ಸಂಘಮಿತ್ರೆರನ್ನು ಕೂಡಾ ಧರ್ಮ ಪ್ರಸಾರಕ್ಕೆ ಶ್ರೀಲಂಕಾಗೆ ಕಳುಹಿಸಿದನು. ಭಾರತದ ಎಲ್ಲ ಭಾಗಗಳಲ್ಲಿ ಧರ್ಮ ಪ್ರಸಾರವಾಯಿತು. ಅಲ್ಲದೇ, ಮೆಸಪೊಟೋಮಿಯಾ, ಸಿರಿಯಾ, ಈಜಿಪ್ಟ, ಮ್ಯಾಸಿಡೋನಿಯಾ, ಕಾಂಬೋಡಿಯಾ,

ಶ್ರೀಲಂಕಾ, ಮಧ್ಯ ಏಷ್ಯಾ, ಪಶ್ಚಿಮ ಏಷ್ಯಾ ದೇಶಗಳಲ್ಲಿ ಧರ್ಮ ಪಸರಿಸಿತು. ಮುಂದೆ 7ನೇ ಶತಮಾನದವರೆಗೂ ಪ್ರಬಲವಾಗಿತ್ತು. ಇದೆಲ್ಲವೂ ಹೇಗೆ ಸಾಧ್ಯವಾಯಿತೆಂದರೆ ಭಗವಾನ್ ಬುದ್ಧನ ವ್ಯಕ್ತಿತ್ವ ಮತ್ತು ಬೋಧನಾಶ್ರಮದಿಂದ, ಸರಳ ತತ್ವಗಳಿಂದ, ಜನರಾಡುವ ಸರಳ ಭಾಷೆ (ಪ್ರಾಕೃತ)ಯಿಂದ, ಹೊಂದಿಕೊಳ್ಳುವ ಸ್ವಭಾವ ಗುಣದಿಂದ, ಸಮಾನತೆಯ ನೀತಿಯಿಂದ, ಸರಳ ಮತ್ತು ಕಡಿಮೆ ವೆಚ್ಚದ ಧರ್ಮ ಮತ್ತು ರಾಜಾಶ್ರಯ ಇವುಗಳಿಂದಾಗಿ ಈ ಧರ್ಮ ಪ್ರಬಲವಾಗಿ ಪ್ರಚಾರಗೊಂಡಿತು.

ನಂತರ ನಾಲ್ಕು ಬೌದ್ಧ ಮಹಾಸಭೆಗಳು ಜರುಗಿದವು. ಇಂದಿಗೂ ಈ ಧರ್ಮವು ಉಳಿದಿದೆ ಎಂದರೆ ಅದು ಬುದ್ಧನಿಂದ ಮಾತ್ರ ಸಾಧ್ಯವಾಗಿದೆ ಅಂದರೆ ತಪ್ಪಾಗಲಾರದು.

**ಪರಾಮರ್ಶನ ಗ್ರಂಥಗಳು:**

1. ಜಗದೀಶ್ ಕೊಪ್ಪ ಎನ್. (2012). ಬುದ್ಧ ಚರಿತೆ. ಸ್ವಪ್ನ ಬುಕ್ ಹೌಸ್. ಬೆಂಗಳೂರು.
2. ಪಾಲ್ ಕಾರಸ್. (2016). ಬುಧ್ದೋಪದೇಶ. ಸಮಾಚಾರ ಮತ್ತು ಪ್ರಸಾರ ಸಚಿವಾಲಯ. ಭಾರತ ಸರ್ಕಾರ.
3. ಕೃಷ್ಣಮೂರ್ತಿ ಜಿ. ಎಂ. (2012). ಭಗವಾನ್ ಬುದ್ಧ. ವಸಂತ ಪ್ರಕಾಶನ. ಬೆಂಗಳೂರು.
4. ಜಗದೀಶ್ ಕೊಪ್ಪ ಎನ್. (2022). ಬುದ್ದ ಮತ್ತು ಆತನ ಧಮ್ಮ. ನವಕರ್ನಾಟಕ ಪಬ್ಲಿಕೇಷನ್. ಬೆಂಗಳೂರು.
5. ಹನುಮಂತು & ಲಲಿತಾಂಬ ಬಿ. ವೈ. (2019). ಬೌದ್ಧ ಧರ್ಮದ ದರ್ಶನ (ಅನು).ಕುವೆಂಪು ಭಾಷಾ ಭಾರತಿ ಪ್ರಾಧಿಕಾರ. ಬೆಂಗಳೂರು.
6. ಅಶ್ವತ್ಥನಾರಾಯಣ್ ರಾವ್. (2021). ಧರ್ಮಪದ. ಪ್ರಕೃತಿ ಪ್ರಕಾಶನ. ಬೆಂಗಳೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.